# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ    E-mail : kannadapostnews@gmail.com    / ಕನ್ನಡ post    Price: ₹1

Vol.No.02 | Issue. 218 | Pages. 2 | Date: 08-08-2026, SATURDAY    RNI NO: KARKAN/2024/89601    Kannada Daily

ಸಂಪುಟ : 02 - ಸಂಚಿಕೆ : 218 - ಪುಟಗಳು : 2    08-08-2026 ಶನಿವಾರ    Ph: 8762954248    ದರ : ₹1


# ನೀರಗುಂದದಲ್ಲಿ ಪತ್ತೆಯಾದ ವೀರಗಲ್ಲು

## ಹೊಯ್ಸಳ ರಾಜ ವಿಷ್ಣುವರ್ಧನನ ಕೊನೆಯ ದಿನದ ರಹಸ್ಯ ಬಯಲಿಗೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅರಸೀಕೆರೆ ತಾಲೂಕಿನ ನೀರಗುಂದ ಗ್ರಾಮದಲ್ಲಿ ಪತ್ತೆಯಾದ ಹೊಯ್ಸಳ ಕಾಲದ ವೀರಗಲ್ಲು (ವೀರಶಿಲೆ) ಇತಿಹಾಸ ಸಂಶೋಧಕರಲ್ಲಿ ಹೊಸ ಕುತೂಹಲ ಮೂಡಿಸಿದೆ. ವೀರಗಲ್ಲಿನ ಮೇಲಿರುವ ಕನ್ನಡ ಶಾಸನವು ಹೊಯ್ಸಳ ಸಾಮ್ರಾಟ ವಿಷ್ಣುವರ್ಧನ ಅವರ ಮರಣದ ದಿನಾಂಕ ಮತ್ತು ಕೊನೆಯ ದಿನಗಳ ಕುರಿತು ದಶಕಗಳಿಂದ ಇದ್ದ ಗೊಂದಲಕ್ಕೆ ಸ್ಪಷ್ಟನೆ ನೀಡುವ ಮಹತ್ವದ ದಾಖಲೆ ಎನ್ನಲಾಗುತ್ತಿದೆ.

ನೀರಗುಂದ ಗ್ರಾಮದಲ್ಲಿರುವ ಹೊಯ್ಸಳ ಕಾಲದ ಮಲ್ಲೇಶ್ವರ ಹಾಗೂ ಲಕ್ಷ್ಮೀನಾರಾಯಣಸ್ವಾಮಿ ದೇವಾಲಯಗಳಲ್ಲಿ ಲಕ್ಷ್ಮೀನಾರಾಯಣ ದೇವಾಲಯ ಶಿಥಿಲಾವಸ್ಥೆಗೆ ತಲುಪಿದ್ದ ಹಿನ್ನೆಲೆಯಲ್ಲಿ ಗ್ರಾಮಸ್ಥರು ಸಾರ್ವಜನಿಕರ ಸಹಕಾರದೊಂದಿಗೆ ಪುನರುಜ್ಜೀವನ ಕಾಮಗಾರಿ ಆರಂಭಿಸಿದ್ದರು.

ಜೂನ್ 28ರಂದು ಅಡಿಪಾಯ ಕಾಮಗಾರಿ ವೇಳೆ ಎರಡು ಪ್ರಾಚೀನ ಕಲ್ಲಿನ ಫಲಕಗಳು ಪತ್ತೆಯಾಗಿದ್ದು, ಅವುಗಳಲ್ಲಿ ಒಂದರಲ್ಲಿ ಶಾಸನವಿರುವುದು ಗಮನ ಸೆಳೆದಿದೆ.

ಹೊಯ್ಸಳ ವಾಸ್ತುಶಿಲ್ಪದ ಅಧ್ಯಯನದಲ್ಲಿ ತೊಡಗಿರುವ ಸಂಶೋಧಕ ಶಶಿಧರ್ ಎಚ್.ಜಿ. ಅವರು ಸ್ಥಳಕ್ಕೆ ಭೇಟಿ ನೀಡಿ ಎರಡೂ ಕಲ್ಲುಗಳು ವೀರಗಲ್ಲುಗಳು ಎಂದು ಗುರುತಿಸಿದ್ದಾರೆ. ಅವುಗಳಲ್ಲಿ ಒಂದರ ಮೇಲಿರುವ ಪ್ರಾಚೀನ ಕನ್ನಡ ಶಾಸನವನ್ನು ಓದಿ ಇತರೆ ತಜ್ಞರೊಂದಿಗೆ ಪರಿಶೀಲಿಸಿದ ಬಳಿಕ, ಅದು ನೀರಗುಂದದ ಮಾರವ್ವೆ ಎಂಬ ಮಹಿಳೆ ತನ್ನ ಪತಿ ಹಾಗೂ ಸೈನಿಕನಾಗಿದ್ದ ಬೊಪ್ಪನ ಸ್ಮರಣಾರ್ಥ ಸ್ಥಾಪಿಸಿದ ವೀರಗಲ್ಲು ಎಂದು ತಿಳಿದುಬಂದಿದೆ.





ಶಾಸನದ ಪ್ರಕಾರ, ಹೊಯ್ಸಳ ರಾಜ ವಿಷ್ಣುವರ್ಧನ ಅವರು ಬಂಕಾಪುರದಲ್ಲಿ ನಿಧನರಾದ ಬಳಿಕ, ಬೊಪ್ಪ ಯುದ್ಧದಲ್ಲಿ ಪ್ರಾಣತ್ಯಾಗ ಮಾಡಿದ್ದಾನೆ ಎಂದು ಉಲ್ಲೇಖಿಸಲಾಗಿದೆ. ಶಾಸನದಲ್ಲಿರುವ ದಿನಾಂಕವು ದುರ್ಮತಿ ಸಂವತ್ಸರ, ಪುಷ್ಯ ಮಾಸದ ಏಕಾದಶಿ, ಶಕ 1064 ಎಂದು ಉಲ್ಲೇಖವಾಗಿದ್ದು, ಗ್ರೆಗೋರಿಯನ್ ಕ್ಯಾಲೆಂಡರ್ ಪ್ರಕಾರ ಅದು 1141ರ ಡಿಸೆಂಬರ್ 11ಕ್ಕೆ ಹೊಂದಿಕೆಯಾಗುತ್ತದೆ ಎಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

ಇದುವರೆಗೆ ವಿಷ್ಣುವರ್ಧನ ಅವರ ಮರಣದ ವರ್ಷ ಕುರಿತು 1149 ಮತ್ತು 1152 ಎಂಬ ಭಿನ್ನಾಭಿಪ್ರಾಯಗಳಿದ್ದವು. ಆದರೆ ನೀರಗುಂದದಲ್ಲಿ ಪತ್ತೆಯಾದ ಈ ಶಾಸನವು ಆ ಗೊಂದಲ ನಿವಾರಣೆಗೆ ಪ್ರಮುಖ ಸಾಕ್ಷಿಯಾಗುವ ಸಾಧ್ಯತೆ ಇದೆ ಎಂದು ಇತಿಹಾಸ ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಹಾಸನ ಸರ್ಕಾರಿ ವಸ್ತುಸಂಗ್ರಹಾಲಯದ ಕ್ಯುರೇಟರ್ ಎಚ್.ಸಿ. ಕುಮಾರ್ ಅವರು ಸಹ ಸ್ಥಳಕ್ಕೆ ಭೇಟಿ ನೀಡಿ ಶಾಸನವನ್ನು ಪರಿಶೀಲಿಸಿದ್ದು, ಇದು ವಿಷ್ಣುವರ್ಧನನ ಕೊನೆಯ ದಿನಗಳ ಕುರಿತು ಮಹತ್ವದ ಮಾಹಿತಿ ನೀಡುವ ಅಪರೂಪದ ದಾಖಲೆಯಾಗಬಹುದು ಎಂದು ಹೇಳಿದ್ದಾರೆ. ಶಾಸನದ ಸಂಪೂರ್ಣ ವಿಶ್ಲೇಷಣೆ ಮತ್ತು ದೃಢೀಕರಣ ಕಾರ್ಯವನ್ನು ತಜ್ಞರು ಮುಂದುವರಿಸಿದ್ದಾರೆ.

ಇದೇ ವೇಳೆ, ಗ್ರಾಮಸ್ಥರು ಸುಮಾರು 13 ಲಕ್ಷ ರೂ. ವೆಚ್ಚದಲ್ಲಿ ದೇವಾಲಯ ಪುನರುಜ್ಜೀವನ ಕಾರ್ಯ ಕೈಗೊಂಡಿದ್ದು, ಈಗಾಗಲೇ 7 ಲಕ್ಷ ರೂ. ಸಂಗ್ರಹಿಸಿ ಖರ್ಚು ಮಾಡಿದ್ದಾರೆ. ಆದರೆ ನಿಧಿ ಕೊರತೆಯಿಂದ ಕಾಮಗಾರಿ ತಾತ್ಕಾಲಿಕವಾಗಿ ಸ್ಥಗಿತಗೊಂಡಿದೆ. ದೇವಾಲಯದ ಜೊತೆಗೆ ಪತ್ತೆಯಾದ ಈ ಅಮೂಲ್ಯ ವೀರಗಲ್ಲು ಮತ್ತು ಶಾಸನವನ್ನು ಸಂರಕ್ಷಿಸಲು ಸರ್ಕಾರ ಮುಂದಾಗಬೇಕು ಎಂದು ಸ್ಥಳೀಯರು ಹಾಗೂ ಇತಿಹಾಸ ಸಂಶೋಧಕರು ಒತ್ತಾಯಿಸಿದ್ದಾರೆ.

# ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಸೂಚನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಸಕಲೇಶಪುರ: ತಾಲೂಕಿನ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿಗೆ ತೊಂದರೆಯಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಅಧಿಕಾರಿಗಳು ಬೇಜವಾಬ್ದಾರಿ ಬಿಟ್ಟು ಕೆಲಸ ಮಾಡಬೇಕು ಎಂದು ಶಾಸಕ ಸಿಮೆಂಟ್ ಮಂಜು ಎಚ್ಚರಿಕೆ ನೀಡಿದರು.

ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಗ್ರಾಮ ಪಂಚಾಯಿತಿಗಳಲ್ಲಿ ಸಿಬ್ಬಂದಿ ಕೊರತೆ ನೆಪವಾಗಬಾರದು. ಜನರ ಕೆಲಸಗಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

ಸಾರ್ವಜನಿಕರಿಗೆ ಗುಣಮಟ್ಟದ ಸೇವೆ ಒದಗಿಸುವುದು ಹಾಗೂ ತಾಲೂಕು ಪಂಚಾಯಿತಿಯ ಆಸ್ತಿ-ಪಾಸ್ತಿಗಳನ್ನು ಸಮರ್ಪಕವಾಗಿ ಸಂರಕ್ಷಿಸುವುದು ನಮ್ಮ ಪ್ರಮುಖ ಆದ್ಯತೆಯಾಗಿದೆ. ಅಧಿಕಾರಿಗಳು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕು ಎಂದು ಅವರು ಹೇಳಿದರು.

ವಿಬಿಜಿ ರಾಮ್‌ಜಿ ಯೋಜನೆಯ ಮಾರ್ಗಸೂಚಿಗಳ ಕುರಿತು ಅಧಿಕಾರಿಗಳೊಂದಿಗೆ ವಿಸ್ತೃತ ಚರ್ಚೆ ನಡೆಸಿದ ಶಾಸಕರು, ಯೋಜನೆಯಡಿ ಕೈಗೆತ್ತಿಕೊಳ್ಳಬಹುದಾದ ಕಾಮಗಾರಿಗಳ ಕುರಿತು ಮಾಹಿತಿ ಪಡೆದುಕೊಂಡರು.

ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ಮನೆಗಳ ವಿತರಣೆಯಲ್ಲಿ ಹಿಂದೆ ಉಂಟಾಗಿದ್ದ ಸಮಸ್ಯೆಗಳ ಬಗ್ಗೆ ಅಧಿಕಾರಿಗಳಿಂದ ವಿವರ ಪಡೆದು, ಅರ್ಹ ಫಲಾನುಭವಿಗಳಿಗೆ ಯಾವುದೇ ಅನ್ಯಾಯವಾಗದಂತೆ ಪಾರದರ್ಶಕವಾಗಿ ಯೋಜನೆ ಜಾರಿಗೊಳಿಸಬೇಕು ಎಂದು ಸೂಚಿಸಿದರು.

ಗ್ರಾಮ ಪಂಚಾಯಿತಿಗಳಲ್ಲಿ ಚುನಾಯಿತ ಆಡಳಿತ ಮಂಡಳಿ ಇಲ್ಲದ ಹಿನ್ನೆಲೆಯಲ್ಲಿ ಸರ್ಕಾರಿ ಅಧಿಕಾರಿಗಳನ್ನು ಆಡಳಿತಾಧಿಕಾರಿಗಳಾಗಿ ನೇಮಿಸಲಾಗಿದೆ. ಆದರೆ, ಸಾರ್ವಜನಿಕರಿಗೆ ಈ ಅಧಿಕಾರಿಗಳು ಸಮರ್ಪಕವಾಗಿ ಲಭ್ಯವಾಗುತ್ತಿಲ್ಲ ಎಂಬ ದೂರುಗಳು ಕೇಳಿಬರುತ್ತಿರುವ ಬಗ್ಗೆ ಶಾಸಕ ಸಿಮೆಂಟ್ ಮಂಜು ಅಸಮಾಧಾನ ವ್ಯಕ್ತಪಡಿಸಿದರು.

ಜನಪ್ರತಿನಿಧಿಗಳು ಇದ್ದಾಗ ಸಾರ್ವಜನಿಕರ ಕೆಲಸಗಳು ಸುಲಭವಾಗಿ ನೆರವೇರುತ್ತವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನಪ್ರತಿನಿಧಿಗಳ ಪಾತ್ರ ಮಹತ್ವದ್ದಾಗಿದೆ. ಪ್ರಸ್ತುತ ತಾಲೂಕು ಮಟ್ಟದ ಅಧಿಕಾರಿಗಳಿಗೆ ಗ್ರಾಮ ಪಂಚಾಯಿತಿಗಳ ಹೆಚ್ಚುವರಿ ಜವಾಬ್ದಾರಿ ಇದ್ದರೂ, ಸಾರ್ವಜನಿಕರಿಗೆ ತೊಂದರೆಯಾಗುವುದನ್ನು ಸಹಿಸಲು ಸಾಧ್ಯವಿಲ್ಲ. ಪ್ರತಿಯೊಬ್ಬ ಆಡಳಿತಾಧಿಕಾರಿಯೂ ವಾರದಲ್ಲಿ ನಿಗದಿತ ಸಮಯವನ್ನು ಗ್ರಾಮ ಪಂಚಾಯಿತಿಯಲ್ಲಿ ಕಡ್ಡಾಯವಾಗಿ ಮೀಸಲಿಟ್ಟು ಸಾರ್ವಜನಿಕರಿಗೆ ಲಭ್ಯರಾಗಬೇಕು. ಈ ಕುರಿತು ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ ಕಟ್ಟುನಿಟ್ಟಿನ ಆದೇಶ ಹೊರಡಿಸಲಾಗುವುದು ಎಂದು ಶಾಸಕ ಸಿಮೆಂಟ್ ಮಂಜು ಎಚ್ಚರಿಕೆ ನೀಡಿದರು.

# ಸರ್ಕಾರಿ ನೌಕರಿ ಪಡೆಯಲು ಕಠಿಣ ಪರಿಶ್ರಮ ಬೇಕು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸ್ಪರ್ಧಾತ್ಮಕ ಯುಗದಲ್ಲಿ ಸರ್ಕಾರಿ ಉದ್ಯೋಗ ಪಡೆಯುವುದು ಸುಲಭದ ಮಾತಲ್ಲ. ಸ್ಪಷ್ಟ ಗುರಿ, ಗುಣಮಟ್ಟದ ಶಿಕ್ಷಣ, ನಿರಂತರ ಅಧ್ಯಯನ, ಸಮಯದ ಸಮರ್ಪಕ ನಿರ್ವಹಣೆ ಹಾಗೂ ಆತ್ಮವಿಶ್ವಾಸ ಅತ್ಯವಶ್ಯಕ ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಸಮಾಜ ಕಲ್ಯಾಣ ಇಲಾಖೆ, ಸಾರ್ವಜನಿಕ ಗ್ರಂಥಾಲಯ ಹಾಗು ಭಾರತೀಯ ವಿದ್ಯಾರ್ಥಿ ಸಂಘದಿಂದ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಶುಕ್ರವಾರ ಏರ್ಪಡಿಸಿದ್ದ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿ ಕುರಿತ ಒಂದು ದಿನದ ಉಚಿತ ಕಾರ್ಯಾಗಾರದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ಮಾರ್ಗದರ್ಶಿ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದರು.

ಪ್ರಸ್ತುತ ದಿನಗಳಲ್ಲಿ ಸರ್ಕಾರಿ ಉದ್ಯೋಗಗಳಿಗೆ ತೀವ್ರ ಸ್ಪರ್ಧೆ ಇದೆ. ಶಿಕ್ಷಣ ಪೂರ್ಣಗೊಳಿಸಿದ ಪ್ರತಿಯೊಬ್ಬರಿಗೂ ಉದ್ಯೋಗ ಸಿಗುವುದಿಲ್ಲ. ಒಂದು ಹುದ್ದೆಗೆ ನೂರಾರು ಅಭ್ಯರ್ಥಿಗಳು ಅರ್ಜಿ ಸಲ್ಲಿಸುತ್ತಿದ್ದು, ಪ್ರತಿಭೆ ಮತ್ತು ಪರಿಶ್ರಮ ಇರುವವರೇ ಯಶಸ್ಸು ಸಾಧಿಸುತ್ತಾರೆ. ಆದ್ದರಿಂದ ವಿದ್ಯಾರ್ಥಿಗಳು ಶಾಲಾ ಹಂತದಿಂದಲೇ ತಮ್ಮ ಗುರಿ ನಿಗದಿಪಡಿಸಿ ಅದಕ್ಕೆ ತಕ್ಕಂತೆ ಸಿದ್ಧತೆ ಆರಂಭಿಸಬೇಕೆಂದು ಸಲಹೆ ನೀಡಿದರು.




ಹತ್ತನೇ ತರಗತಿ ಮುಗಿ ಯುವಷ್ಟರಲ್ಲಿ ಭಾಷೆಯ ಮೇಲಿನ ಹಿಡಿತ, ಪಿಯುಸಿ ಹಂತಕ್ಕೆ ಬಂದಾಗ ಓದುವ ವಿಧಾನದಲ್ಲಿ ಬದಲಾವಣೆ ಮಾಡಿಕೊಂಡು, ಕೇವಲ ಅಂಕಗಳಿಗಾಗಿ ಅಲ್ಲ, ಭವಿಷ್ಯದ ಗುರಿ ಗಮನದಲ್ಲಿಟ್ಟುಕೊಂಡು ಅಧ್ಯಯನ ಮಾಡಬೇಕು. ಪದವಿ ಎಂಬುದು ಉದ್ಯೋಗ ಮತ್ತು ಜೀವನದ ಗುರಿ ಸಾಧನೆಗೆ ನೆರವಾಗುವ ಸಾಧನವಾಗಬೇಕೆಂದರು.

ಕಾರ್ಯಾಗಾರದಲ್ಲಿ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ಪಠ್ಯಕ್ರಮ, ಅಧ್ಯಯನ ವಿಧಾನ, ಸಮಯ ನಿರ್ವಹಣೆ, ಸಂದರ್ಶನ ಕೌಶಲ ಹಾಗು ನೇಮಕಾತಿ ಪ್ರಕ್ರಿಯೆಗಳ ಕುರಿತು ತಜ್ಞರು ಸಮಗ್ರ ಮಾಹಿತಿ ನೀಡಿದರು.

ಬೆಂಗಳೂರು ಅಕ್ಕ ಐಎಎಸ್ ಅಕಾಡೆಮಿ ಮುಖ್ಯಸ್ಥ ಡಾ. ಶಿವಕುಮಾರ್, ವಿವಿಧ ನೇಮಕಾತಿ ಪರೀಕ್ಷೆಗಳ ಸ್ವರೂಪ, ಅಧ್ಯಯನ ತಂತ್ರಗಳು ಹಾಗೂ ಯಶಸ್ಸಿನ ಸೂತ್ರಗಳ ಕುರಿತು ಉಪನ್ಯಾಸ ನೀಡಿದರು. ಚನ್ನರಾಯಪಟ್ಟಣ ಪಿಐ ಸಂತೋಷ್ ಕುಮಾರ್ ಅವರು ಪೊಲೀಸ್ ನೇಮಕಾತಿ ಪರೀಕ್ಷೆಗಳ ದೈಹಿಕ ಹಾಗೂ ಲಿಖಿತ ಪರೀಕ್ಷೆಗಳ ಸಿದ್ಧತೆ ಕುರಿತು ಮಾರ್ಗದರ್ಶನ ನೀಡಿದರು. ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಪಿ.ದೂದಪೀರ್, ಸರ್ಕಾರಿ ಕಲಾ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಪ್ರೊ. ಮಹೇಶ್, ಪವರ್ ಇಂಡಿಯಾ ಅಕಾಡೆಮಿಯ ರಮೇಶ್, ಜಿಲ್ಲಾ ಕೇಂದ್ರ ಗ್ರಂಥಾಲಯದ ಉಪ ನಿರ್ದೇಶಕಿ ಜಿ.ಐ.ನಳಿನಿ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮನುಕುಮಾರ್, ವಕೀಲ ಯೋಗೇಶ್ ಹುಲಿಕೆರೆ, ಬಿವಿಎಸ್ ಜಿಲ್ಲಾ ಸಂಯೋಜಕ ಡಾ. ಶಶಿಧರ್ ಮೌರ್ಯ, ಪತ್ರಕರ್ತ ನಾಗರಾಜು ಹೆತ್ತೂರು, ರಾಮು ನರಸಿನಕುಪ್ಪೆ ಮತ್ತಿತರರಿದ್ದರು.

# ಕನಿಷ್ಟ ವೇತನಕ್ಕೆ ಆಗ್ರಹಿಸಿ ಆ. 13ಕ್ಕೆ ಪ್ರತಿಭಟನಾ ಸಮಾವೇಶ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರಾಜ್ಯದ ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರ ವೇತನ ಹೆಚ್ಚಳಕ್ಕೆ ಆಗ್ರಹಿಸಿ ಆ.13ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ರಾಜ್ಯ ಮಟ್ಟದ ಸಮಾವೇಶ ಹಾಗೂ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ಸರ್ಕಾರಿ ಇಲಾಖೆಗಳ ಹೊರಗುತ್ತಿಗೆ ನೌಕರರ ಸಂಘದ ರಾಜ್ಯಾಧ್ಯಕ್ಷ ಎಂ.ಬಿ. ನಾಗಣ್ಣಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಕನಿಷ್ಟ ವೇತನ ಪರಿಷ್ಕರಿಸಿ ಸರ್ಕಾರ ಅಧಿಸೂಚನೆ ಹೊರಡಿಸಿ 3 ತಿಂಗಳು ಕಳೆದರೂ ಕೆಲವು ಇಲಾಖೆಗಳಲ್ಲಿ ಜಾರಿಯಾಗಿಲ್ಲ. ಸುಮಾರು 2 ಲಕ್ಷ ಹೊರಗುತ್ತಿಗೆ ನೌಕರರು ಕಡಿಮೆ ವೇತನದಲ್ಲಿ ದುಡಿಯುತ್ತಿದ್ದು, ಬದುಕು ನಿರ್ವಹಣೆ ಕಷ್ಟವಾಗಿದೆ. ಸರ್ಕಾರ ನ್ಯಾಯಸಮ್ಮತ ವೇತನ ನೀಡಲು ಮುಂದಾಗದಿರುವುದು ಕಾರ್ಮಿಕರ ಬದುಕನ್ನು ಮತ್ತಷ್ಟು ಸಂಕಷ್ಟಕ್ಕೆ ತಳ್ಳಿದೆ ಎಂದು ಬೇಸರ ವ್ಯಕ್ತಪಡಿಸಿದರು.




ವೇತನ ಪರಿಷ್ಕರಣೆ ಬೇಡಿಕೆ ಹಲವು ವರ್ಷಗಳದ್ದು, ಅದಕ್ಕಾಗಿ ಹಲವು ರೀತಿಯ ಹೋರಾಟ ನಡೆದಿವೆ. ಕಡೆಗೆ ನ್ಯಾಯಾಲಯದ ಮಧ್ಯ ಪ್ರವೇಶ ಬಳಿಕ ಕಾರ್ಮಿಕ ಇಲಾಖೆ ಶೇ.40ರಷ್ಟು ವೇತನ

ಹೆಚ್ಚಳ ಮಾಡಿದೆ. ಆದರೆ, ಪರಿಷ್ಕೃತ ವೇತನ ಜಾರಿಗೆ ಕೆಲವು ಖಾಸಗಿ ಉದ್ಯಮಿಗಳು ಆಕ್ಷೇಪ ವ್ಯಕ್ತಪಡಿಸಿ ನ್ಯಾಯಾಲಯದ ಮೊರೆ ಹೋಗಿರುವುದನ್ನೇ ನೆಪವಾಗಿಸಿ ಸರ್ಕಾರವೇ ಅಧಿಸೂಚನೆ ಜಾರಿಗೊಳಿಸುವಲ್ಲಿ ಹಿಂದೆ ಸರಿದಿದೆ ಎಂದು ಆರೋಪಿಸಿದರು.

ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿರುವುದನ್ನು ಕಾರಣವನ್ನಾಗಿ ಹೇಳಿ ಇಲಾಖೆಗಳು ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುತ್ತಿವೆ. ಸರ್ಕಾರಿ ಇಲಾಖೆಗಳ ಮುಖ್ಯಸ್ಥರು ಸರ್ಕಾರದಿಂದ ಯಾವುದೇ ಸ್ಪಷ್ಟ ಸೂಚನೆ ಬಂದಿಲ್ಲ ಎಂಬ ನೆಪ ಹೇಳುತ್ತಾ ಪರಿಷ್ಕೃತ ವೇತನ ಜಾರಿಗೆ ಮುಂದಾಗುತ್ತಿಲ್ಲ. ಕಾರ್ಮಿಕ ಇಲಾಖೆ ಕೇವಲ ವೇತನದ ಮಾಹಿತಿ ನೀಡುವ ಮಟ್ಟಕ್ಕೆ ಸೀಮಿತವಾಗಿದ್ದು, ಅಧಿಸೂಚನೆ ಅನುಷ್ಠಾನಗೊಳಿಸುವ ಹೊಣೆಗಾರಿಕೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತಿಲ್ಲ ಎಂದು ದೂರಿದರು.

ಸರ್ಕಾರಿ ಇಲಾಖೆಗಳ ಹೊರಗುತ್ತಿಗೆ ನೌಕರರಿಗೆ ಪರಿಷ್ಕೃತ ಕನಿಷ್ಠ ವೇತನ ಜಾರಿಗೊಳಿಸಲು ಯಾವುದೇ ಕಾನೂನು ತೊಡಕು ಇಲ್ಲ. ಕೋರ್ಟ್ ಯಾವುದೇ ತಡೆ ಕೊಟ್ಟಿಲ್ಲ. ಆದರೂ ಸರ್ಕಾರ ಉದ್ದೇಶ ಪೂರ್ವಕವಾಗಿ ವಿಳಂಬ ಮಾಡುತ್ತಿರುವುದು ಕಾರ್ಮಿಕ ವಿರೋಧಿ ಧೋರಣೆಯಾಗಿದೆ. ಈ ಕಾರಣದಿಂದಲೇ ಆ.13 ರಂದು ಬೃಹತ್ ಆಗ್ರಹ ಸಮಾವೇಶ ನಡೆಸಿ ಸರ್ಕಾರಕ್ಕೆ ಎಚ್ಚರಿಕೆ ಸಂದೇಶ ರವಾನೆ ಮಾಡುತ್ತೇವೆ. ಸಮಾವೇಶದಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಿಂದ ಹತ್ತು ಸಾವಿರಾರಕ್ಕೂ ಹೆಚ್ಚಿನ ಹೊರಗುತ್ತಿಗೆ ನೌಕರರು ಭಾಗವಹಿಸಲಿದ್ದಾರೆ. ಪರಿಷ್ಕೃತ ಕನಿಷ್ಠ ವೇತನವನ್ನು ತಕ್ಷಣ ಜಾರಿಗೊಳಿಸುವಂತೆ ಸರ್ಕಾರವನ್ನು ಒತ್ತಾಯಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ರಾಜೇಂದ್ರ, ಸರೋಜಮ್ಮ, ಮನು, ರಾಜೇಂದ್ರ, ವೆಂಕಟಲಕ್ಷ್ಮಿ ಇದ್ದರು.

# ಡ್ರೋನ್‌ನಿಂದ ಔಷಧ ಸಿಂಪಡಣೆ ಪ್ರಾತ್ಯಕ್ಷಿಕೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕಾರೆಕೆರೆ ಕೃಷಿ ಮಹಾವಿದ್ಯಾಲಯದ ಬಿಎಸ್‌ಸಿ ಅಂತಿಮ ವರ್ಷದ ವಿದ್ಯಾರ್ಥಿಗಳು ಚನ್ನರಾಯಪಟ್ಟಣ ತಾಲ್ಲೂಕಿನ ಚಿಕ್ಕಮತಿಘಟ್ಟ ಗ್ರಾಮದಲ್ಲಿ ಹಮ್ಮಿಕೊಂಡಿರುವ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದಲ್ಲಿ ಬೆಳೆಗೆ ಡ್ರೋನ್ ಮೂಲಕ ಔಷಧಿ ಸಿಂಪಡಣೆ, ಯಾಂತ್ರಿಕ ಕಬ್ಬು ಕೊಯ್ಲು ಕುರಿತು ಪ್ರಾತ್ಯಕ್ಷಿಕೆ ನಡೆಸಿಕೊಟ್ಟರು.

ಗ್ರೋಮೋರ್ ಕಂಪನಿ ವತಿಯಿಂದ ಶುಂಠಿ ಬೆಳೆ ಹೊಲದಲ್ಲಿ ಡ್ರೋನ್ ಮೂಲಕ ಬೆಳೆ ಸಂರಕ್ಷಣಾ ಔಷಧ ಸಿಂಪಡಣೆಯ ಪ್ರಾತ್ಯಕ್ಷಿಕೆ ಆಯೋಜಿಸಲಾಗಿತ್ತು. ಡ್ರೋನ್ ಬಳಕೆಯಿಂದ ಕಡಿಮೆ ಸಮಯದಲ್ಲಿ ಸಮರ್ಪಕ ಔಷಧ ಸಿಂಪಡಣೆ, ಕಾರ್ಮಿಕ ವೆಚ್ಚದ ಉಳಿತಾಯ, ರಾಸಾಯನಿಕಗಳ ನೇರ ಸಂಪರ್ಕದಿಂದ ರೈತರ ಆರೋಗ್ಯ ರಕ್ಷಣೆ ಹಾಗೂ ನಿಖರ ಕೃಷಿಯ ಮಹತ್ವದ ಬಗ್ಗೆ ತಜ್ಞರು ವಿದ್ಯಾರ್ಥಿಗಳಿಗೆ ವಿವರಿಸಿದರು. ಡ್ರೋನ್ ಕಾರ್ಯವಿಧಾನ, ಸುರಕ್ಷತಾ ಕ್ರಮ ಹಾಗೂ ಆಧುನಿಕ ಕೃಷಿಯಲ್ಲಿ ಅದರ ಉಪಯೋಗಗಳ ಕುರಿತು ವಿದ್ಯಾರ್ಥಿಗಳು ಪ್ರಾಯೋಗಿಕ ಮಾಹಿತಿ ಪಡೆದರು.

# ಕ್ರೀಡಾಕೂಟಕ್ಕೆ ಸರ್ಕಾರದಿಂದ ದೊರೆಯದ ಅನುದಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಹೋಬಳಿ ಹಾಗೂ ತಾಲ್ಲೂಕು ಮಟ್ಟದ ಕ್ರೀಡಾಕೂಟಗಳನ್ನು ಆಯೋಜಿಸಲು ಸರ್ಕಾರದಿಂದ ಅನುದಾನ ದೊರೆಯುತ್ತಿಲ್ಲ. ಇದರಿಂದ ಗ್ರಾಮೀಣ ಪ್ರತಿಭೆಗಳ ಅನಾವರಣಕ್ಕೆ ತೊಂದರೆ ಆಗುತ್ತಿದೆ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಹೇಳಿದರು.

ತಾಲ್ಲೂಕಿನ ಶ್ರವಣಬೆಳಗೊಳದ ಪಾಲಿಟೆಕ್ನಿಕ್ ಕಾಲೇಜು ಆವರಣದಲ್ಲಿ ಶುಕ್ರವಾರ ನಡೆದ ಹೋಬಳಿ ಮಟ್ಟದ ಪ್ರಾಥಮಿಕ ಶಾಲಾ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಣದ ಜೊತೆಗೆ ಕ್ರೀಡಾಭ್ಯಾಸಕ್ಕೂ ಮಕ್ಕಳು ಆದ್ಯತೆ ನೀಡಬೇಕು. ಕ್ರೀಡೆ ದೈಹಿಕ ಹಾಗೂ ಮಾನಸಿಕ ಸದೃಢತೆಗೆ ಪೂರಕವಾಗಿದ್ದು, ಪ್ರಾಥಮಿಕ ಹಂತದಲ್ಲೇ ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವುದರಿಂದ ಜೀವನದಲ್ಲಿ ಯಶಸ್ಸು ಸಾಧಿಸಲು ಸಾಧ್ಯ ಎಂದರು.

ಸರ್ಕಾರವು ಹೋಬಳಿ ಮತ್ತು ತಾಲ್ಲೂಕು ಮಟ್ಟದ ಕ್ರೀಡಾಕೂಟಗಳಿಗೂ ಸೂಕ್ತ ಅನುದಾನ ನೀಡುವ ಮೂಲಕ ಕ್ರೀಡಾ ವಿದ್ಯಾರ್ಥಿಗಳನ್ನು ಉತ್ತೇಜಿಸಬೇಕು. ಗ್ರಾಮೀಣ ಭಾಗದ ವಿದ್ಯಾರ್ಥಿಗಳಲ್ಲೂ ಅಪಾರ ಕ್ರೀಡಾ ಪ್ರತಿಭೆ ಇದೆ. ಆದರೆ ಸೂಕ್ತ ತರಬೇತಿ ಹಾಗೂ ಮಾರ್ಗದರ್ಶನದ ಕೊರತೆಯಿಂದ ಪ್ರತಿಭೆಗಳು ಬೆಳಕಿಗೆ ಬರುತ್ತಿಲ್ಲ. ಆದ್ದರಿಂದ ಕನಿಷ್ಟ ಪ್ರತಿ ಹೋಬಳಿಗೆ ಒಬ್ಬರು ದೈಹಿಕ ಶಿಕ್ಷಕರನ್ನು ನೇಮಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.



ತಾಲ್ಲೂಕಿನ ಹಲವು ಪ್ರಾಥಮಿಕ ಶಾಲೆಗಳಲ್ಲಿ ಕೊಠಡಿಗಳ ಕೊರತೆ ಇದೆ. ಮಕ್ಕಳಿಗೆ ಉತ್ತಮ ಕಲಿಕಾ ವಾತಾವರಣ ಕಲ್ಪಿಸಲು ಅಗತ್ಯವಿರುವ ಮೂಲಸೌಕರ್ಯ ಒದಗಿಸುವುದು ಸರ್ಕಾರದ ಆದ್ಯತೆಯಾಗಬೇಕು. ಮುಂದಿನ ವಿಧಾನಮಂಡಲ ಅಧಿವೇಶನದಲ್ಲಿ ಕೆಪಿಎಸ್ ಶಾಲೆಗಳಿಗೆ ಅಗತ್ಯ ಅನುದಾನ ಬಿಡುಗಡೆ ಮಾಡುವಂತೆ ಸರ್ಕಾರವನ್ನು ಒತ್ತಾಯಿಸಲಾಗುವುದು ಎಂದು ಭರವಸೆ ನೀಡಿದರು.

ತಾಲ್ಲೂಕು ಶಿಕ್ಷಕರ ಸಂಘದ ಅಧ್ಯಕ್ಷ ಸಿ.ಎನ್. ಗೋಪಾಲ್ ಮಾತನಾಡಿ, ಶಿಕ್ಷಣ ಮತ್ತು ಆರೋಗ್ಯ ಎರಡೂ ಉತ್ತಮ ಸಮಾಜ ನಿರ್ಮಾಣದ ಪ್ರಮುಖ ಆಧಾರ ಸ್ತಂಭಗಳಾಗಿವೆ. ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಶಿಕ್ಷಣದ ಜೊತೆಗೆ ಕ್ರೀಡೆ ಮತ್ತು ಆರೋಗ್ಯಕ್ಕೂ ಸಮಾನ ಆದ್ಯತೆ ನೀಡಬೇಕು. ಕ್ರೀಡೆ ಕೇವಲ ಮನರಂಜನೆಯ ಸಾಧನವಲ್ಲ. ಅದು ವಿದ್ಯಾರ್ಥಿಗಳಲ್ಲಿ ಶಿಸ್ತು, ಸಮಯಪಾಲನೆ, ಆತ್ಮವಿಶ್ವಾಸ, ನಾಯಕತ್ವ ಗುಣ ಹಾಗೂ ಸೋಲು-ಗೆಲುವನ್ನು ಸಮಾನವಾಗಿ ಸ್ವೀಕರಿಸುವ ಮನೋಭಾವ ಬೆಳೆಸುತ್ತದೆಂದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಚ್.ಎನ್.ಲೋಕೇಶ್ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಕೇವಲ ಪಠ್ಯಪುಸ್ತಕದ ಜ್ಞಾನಕ್ಕೆ ಸೀಮಿತವಾಗದೆ ದೈಹಿಕ ಹಾಗೂ ಮಾನಸಿಕವಾಗಿ ಸದೃಢರಾಗಬೇಕು. ನಿಯಮಿತವಾಗಿ ಕ್ರೀಡೆಯಲ್ಲಿ ಪಾಲ್ಗೊಳ್ಳುವುದರಿಂದ ದೈಹಿಕ ಕ್ಷಮತೆ ಹೆಚ್ಚುವುದರ ಜೊತೆಗೆ ಏಕಾಗ್ರತೆ ಮತ್ತು ಕಲಿಕೆಯ ಸಾಮರ್ಥ್ಯವೂ ವೃದ್ಧಿಯಾಗುತ್ತದೆ. ಕ್ರೀಡಾಕೂಟದಲ್ಲಿ ಗೆಲುವು ಸಾಧಿಸುವುದಕ್ಕಿಂತ ಶಿಸ್ತುಬದ್ಧವಾಗಿ ಭಾಗವಹಿಸುವುದು ಮತ್ತು ಕ್ರೀಡಾ ಮನೋಭಾವ ಬೆಳೆಸಿಕೊಳ್ಳುವುದು ಮುಖ್ಯ. ಸೋಲು ಎದುರಾದಾಗ ನಿರಾಶರಾಗದೆ, ಅದನ್ನು ಮುಂದಿನ ಗೆಲುವಿಗೆ ಮೆಟ್ಟಿಲಾಗಿ ಪರಿಗಣಿಸಬೇಕೆಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಅಫ್ತಾಬ್ ಪಾಷಾ, ಪಿಎಸ್‌ಐ ನವೀನ್, ಕ್ಷೇತ್ರ ಶಿಕ್ಷಣಾಧಿಕಾರಿ ಸತೀಶ್, ಬಿಆರ್‌ಸಿ ಅನಿಲ್, ಇಸಿಓ ಯಾದವರಾಜ್, ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನಿರ್ದೇಶಕ ಪಿ.ಟಿ.ಮಂಜೇಶ್, ಜಿಲ್ಲಾ ಕಾರ್ಯದರ್ಶಿ ವಿ.ಜಿ.ದೇವೇಗೌಡ, ಖಜಾಂಚಿ ಅಣ್ಣಪ್ಪ, ಅಕ್ಷರ ದಾಸೋಹ ಅಧಿಕಾರಿ ಉಮಾಶಂಕರ್ ಇದ್ದರು.

# ಹಸು ಖರೀದಿಗೆ ಹೆಚ್‌ಡಿಸಿಸಿ ಬ್ಯಾಂಕ್‌ನಿಂದ ಸಾಲ ಮಂಜೂರು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಹಾಸನ ಹಾಲು ಉತ್ಪಾದಕರ ಸಹಕಾರ ಸಂಘ ಹಾಗೂ ಹೆಚ್‌ಡಿಸಿಸಿ ಬ್ಯಾಂಕ್ ವತಿಯಿಂದ ಹಸು ಖರೀದಿಗೆ ಸಾಲ ನೀಡಲಾಗುತ್ತಿದೆ ಎಂದು ಹಾಮೂಲ್ ಅಧ್ಯಕ್ಷ ಹೆಚ್.ಡಿ.ರೇವಣ್ಣ ಹೇಳಿದರು. ನಗರದ ಹೆಚ್‌ಡಿಸಿಸಿ ಬ್ಯಾಂಕ್ ಸಭಾಂಗಣದಲ್ಲಿ ಗುರುವಾರ ರೈತರಿಗೆ ಮಿಶ್ರತಳಿ ಹಸು ಖರೀದಿಗೆ ಸಾಲ ಮಂಜೂರಾತಿ ಚೆಕ್ ವಿತರಿಸಿ ಮಾತನಾಡಿದ ಅವರು, ಮಳೆ ಕೊರತೆಯಿಂದ ಜಿಲ್ಲೆಯ ಅನ್ನದಾತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಮೆಕ್ಕೆಜೋಳ ಬೆಳೆಗೆ ಬಿಳಿಸುಳಿ ರೋಗ ತಗುಲಿ ಭಾರೀ ನಷ್ಟವುಂಟಾಗಿದೆ. ಇಂತಹ ಸಂದರ್ಭದಲ್ಲಿ ರೈತರಿಗೆ ನೆರವಾಗುವುದು ನಮ್ಮ ಜವಾಬ್ದಾರಿ ಎಂದ ಅವರು ಶೀಘ್ರದಲ್ಲೇ ಹಾಲಿನ ದರ ಹೆಚ್ಚಿಸಲಾಗುವುದು ಎಂದು ಸುಳಿವು ನೀಡಿದರು.

ರೈತರನ್ನು ಹೇಗಾದರೂ ಮಾಡಿ ಮೇಲಕ್ಕೆತ್ತುವುದು ನಮ್ಮ ಉದ್ದೇಶ. ಹಸು ಖರೀದಿಗೆ ಡೇರಿ ಮೂಲಕ ಸಾಲ ಸೌಲಭ್ಯ ನೀಡಲಾಗುತ್ತದೆ. 2 ರಿಂದ 3 ಲಕ್ಷ ರೂ. ಸಾಲ ನೀಡಲಾಗುತ್ತದೆ. ಸಾಲಗಾರರಿಗೆ ಐದು ವರ್ಷಕ್ಕೆ 25 ಸಾವಿರ ರೂ. ಬಡ್ಡಿಯಾಗುತ್ತದೆ. ಯೋಜನೆಯಡಿ ಖರೀದಿಸಿದ ಹಸುವಿಗೆ ಶೇ. 40ರಷ್ಟು ಡೇರಿ ಹಾಗು ಶೇ. 40 ರಷ್ಟು ವಿಮೆಯನ್ನು ಕಟ್ಟುತ್ತೇವೆ. ಉಳಿದ ಶೇ. 20ರ ಕಂತನ್ನು ರೈತರೇ ಪಾವತಿಸಬೇಕು. ಅನಾರೋಗ್ಯ ಮತ್ತಿತರ ಕಾರಣಗಳಿಂದ ಹಸು ಸತ್ತರೆ 75 ಸಾವಿರ ರೂ. ಪರಿಹಾರ ನೀಡಲಾಗುತ್ತದೆ. ಒಬ್ಬ ರೈತ 3 ಹಸು ಖರೀದಿಸುವ ಅವಕಾಶಗಳಿವೆ. ಐದು ವರ್ಷಕ್ಕೆ 10 ಕಂತು ಕಟ್ಟಿದರೆ ಸಾಲ ತೀರುತ್ತದೆ. ಯೋಜನೆಯಡಿ ಲಾಭ ಪಡೆಯಲು 20 ಗುಂಟೆ ಜಮೀನು ಹೊಂದಿರಬೇಕು. ರೈತರು ಕೃಷಿ ಜೊತೆಗೆ ಉಪಕಸುಬಾಗಿ ಹೈನುಗಾರಿಕೆ ಮಾಡಿಕೊಂಡರೆ ಆರ್ಥಿಕವಾಗಿ ಸದೃಢರಾಗಬಹುದು. ಮೂರು ಹಸು ಕಟ್ಟಿದರೆ ಲಕ್ಷಾಂತರ ರೂ. ಲಾಭ ಪಡೆಯಬಹುದು. ಈ ಯೋಜನೆಯಿಂದ ಡೇರಿ ಅಥವಾ ಬ್ಯಾಂಕ್‌ಗೆ ಹೊರೆಯಾಗುವುದಿಲ್ಲ. ಹಸುಗಳನ್ನು ನಾವು ಖರೀದಿಸುವುದಿಲ್ಲ. ರೈತರಿಗೆ ಹಣದ ವ್ಯವಸ್ಥೆ ಮಾಡುವುದಷ್ಟೇ ನಮ್ಮ ಕೆಲಸವೆಂದರು.

ಜಿಲ್ಲೆಯ ರೈತರನ್ನು ಸದೃಢರನ್ನಾಗಿಸುವ ಉದ್ದೇಶದಿಂದ ತರಕಾರಿ ಪದಾರ್ಥಗಳಿಗೆ ಮಾರುಕಟ್ಟೆ ಕಲ್ಪಿಸಲು ವಿಮಾನ ನಿಲ್ದಾಣ ನಿರ್ಮಾಣಕ್ಕೆ ಮುಂದಾಗಿದ್ದೆವು. ಕಾರಣಾಂತರಗಳಿಂದ ಈಗಲೂ ನಿಲ್ದಾಣ ಕೆಲಸ ಮುಗಿದಿಲ್ಲ. ಹೈನುಗಾರಿಕೆ, ತರಕಾರಿ ಬೆಳೆಗೆ ಉತ್ತಮ ಮಾರುಕಟ್ಟೆ ಕಲ್ಪಿಸಿದರೆ ನಮ್ಮ ರೈತರು ಬ್ಯಾಂಕ್‌ನಲ್ಲಿ ಲಕ್ಷ ಲಕ್ಷ ರೂಪಾಯಿ ಇಟ್ಟುಕೊಳ್ಳಬಹುದು.

ನಮ್ಮ ಜಿಲ್ಲೆಯಲ್ಲಿ ಆಲೂಗಡ್ಡೆ ಪ್ರದೇಶ ಕಡಿಮೆಯಾಗಿದೆ. ಬಿಳಿಸುಳಿ ರೋಗದಿಂದ ಮುಸುಕಿನ ಜೋಳ ಹಾಳಾಗಿದೆ. ರೈತರು ಏನು ಮಾಡಬೇಕೆಂದು ದಿಕ್ಕು ತೋಚುತ್ತಿಲ್ಲ. ಕೆರೆಕಟ್ಟೆಗಳಿಗೆ ನೀರು ಬಿಡದೆ ತೊಂದರೆಯಾಗುತ್ತಿದೆ. ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಕೆರೆಗಳೇ ಇಲ್ಲ. ಆದರೂ ಕೆರೆ ಭರ್ತಿ ಮಾಡುವುದಾಗಿ ಭಾಷಣ ಮಾಡುತ್ತಾರೆಂದು ಟೀಕಿಸಿದರು.

ರೈತರಿಗೆ ನೀರು ಕೊಡುವುದಾದರೆ ಕೊಡಿ ಇಲ್ಲವಾದರೆ ಬೆಳೆನಷ್ಟದ ಪರಿಹಾರವನ್ನಾದರೂ ಕೊಡಿ. ಇನ್ನು ಎರಡು ವರ್ಷ ನೀವೇ ಆಡಳಿತ ಮಾಡಿ. ಕೆಲಸವಾದರೂ ಮಾಡಿ ಇಲ್ಲವಾದರೆ ಆರಾಮಾಗಿಯೇ ಇರಿ ನಿಮಗೆ ತೊಂದರೆ ನೀಡುವ ಉದ್ದೇಶ ನಮಗಿಲ್ಲವೆಂದರು.

ಹೆಚ್‌ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸೋಮನಹಳ್ಳಿ ನಾಗರಾಜ್, ಕೆಎಂಎಫ್ ನಿರ್ದೇಶಕ ಸ್ವಾಮಿಗೌಡ, ನಿರ್ದೇಶಕರಾದ ನಾಗರಾಜ್, ಮಂಜೇಗೌಡ, ಗಂಗಾಧರ್, ಪುಟ್ಟಸ್ವಾಮಿಗೌಡ, ಲಕ್ಷ್ಮಣಗೌಡ, ಚನ್ನೇಗೌಡ, ರಂಗಸ್ವಾಮಿ, ಮಳಲಿ ಜಯರಾಮ್, ಸತೀಶ್ ಹೊನ್ನವಳ್ಳಿ ಮತ್ತಿತರರಿದ್ದರು.

# ಜೋಳದ ಬೆಳೆಗೆ ಮಧ್ಯಂತರ ಪರಿಹಾರ: ಸಚಿವ ಶಿವಲಿಂಗೇಗೌಡ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಬೇಲೂರು: ಬಿಳಿಸುಳಿ ರೋಗಕ್ಕೆ ತುತ್ತಾಗಿರುವ ಮುಸುಕಿನ ಜೋಳದ ಬೆಳೆಗೆ ತಕ್ಷಣ ಮಧ್ಯಂತರ ಪರಿಹಾರ ನೀಡುವಂತೆ ಜಿಲ್ಲಾಡಳಿತಕ್ಕೆ ಸೂಚಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಭರವಸೆ ನೀಡಿದರು.

ತಾಲ್ಲೂಕಿನಲ್ಲಿ ಬರ ಅಧ್ಯಯನ ನಡೆಸಿ ಮಾತನಾಡಿದ ಅವರು, ಎನ್‌ಡಿಆರ್‌ಎಫ್ ಮಾರ್ಗಸೂಚಿಯಡಿ ವಿಶೇಷ ಪ್ಯಾಕೇಜ್ ನೀಡಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಬೆಳೆ ವಿಮೆ ಕಟ್ಟಿರುವ ರೈತರಿಗೆ ಶೀಘ್ರ ವಿಮೆ ಪರಿಹಾರ ದೊರಕುವಂತೆ ಸರ್ಕಾರದ ಮಟ್ಟದಲ್ಲಿ ಒತ್ತಾಯಿಸಲಾಗುವುದು ಎಂದು ಹೇಳಿದರು.

ಪರಿಶೀಲನೆ ವೇಳೆ ರೈತ ಮುಖಂಡರು, ಮಾಜಿ ಶಾಸಕರು ಹಾಗೂ ರೈತರು ವಿವರ ಮಾಹಿತಿ ನೀಡಿದ್ದಾರೆ. ಜಿಲ್ಲಾಧಿಕಾರಿ ನೇತೃತ್ವದಲ್ಲಿ ರೈತ ಮುಖಂಡರು, ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳನ್ನೊಳಗೊಂಡ ತಂಡ ರಚಿಸಿ ಪ್ರಕರಣವನ್ನು ಸಮಗ್ರವಾಗಿ ಪರಿಶೀಲಿಸಿ ರೈತರಿಗೆ ಸೂಕ್ತ ನ್ಯಾಯ ದೊರಕಿಸಿಕೊಡಲಾಗುವುದು. ರೈತರ ವಿರುದ್ಧ ದಾಖಲಾಗಿರುವ ಪ್ರಕರಣಗಳ ಬಗ್ಗೆ ಸತ್ಯಾಸತ್ಯತೆ ಪರಿಶೀಲಿಸಲಾಗುವುದು. ತಪ್ಪುಗ್ರಹಿಕೆಯಿಂದ ನೋಟೀಸ್ ನೀಡಿದ್ದರೆ ರೈತರಿಗೆ ನ್ಯಾಯ ಒದಗಿಸಲಾಗುವುದು ಎಂದು ಹೇಳಿದರು. ಸಂಸದ ಶ್ರೇಯಸ್ ಪಟೇಲ್, ಜಿಲ್ಲಾಧಿಕಾರಿ ಕೆ.ಎಸ್. ಲತಾ ಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರೂ ಶುಭಾನ್ವಿತ, ಮಾಜಿ ಸಚಿವ ಬಿ.ಶಿವರಾಂ, ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದಶಿ ಬಳ್ಳೂರು ಸ್ವಾಮಿಗೌಡ, ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ ಇದ್ದರು.

## ಅದ್ದೂರಿ ಸ್ವಾಗತ

ತಾಲ್ಲೂಕಿಗೆ ಆಗಮಿಸಿದ ಸಚಿವರನ್ನು ಕಾಂಗ್ರೆಸ್ ಮುಖಂಡ ಗ್ರಾನೆಟ್ ರಾಜಶೇಖರ್ ಅಭಿಮಾನಿಗಳ ಬಳಗದ ನೇತೃತ್ವದಲ್ಲಿ ಹಗರೆ ಮಾರ್ಗದಲ್ಲಿ ಅದ್ದೂರಿಯಾಗಿ ಸ್ವಾಗತಿಸಲಾಯಿತು. ಈ ವೇಳೆ ನೂರಾರು ಕಾಂಗ್ರೆಸ್ ಕಾರ್ಯಕರ್ತರು, ಅಭಿಮಾನಿಗಳು ಸಚಿವರಿಗೆ ಹಾರ ಹಾಕಿ, ಜೈಕಾರ ಮೊಳಗಿಸಿದರು.

# ಎಸ್ಸಿ-ಎಸ್ಟಿ ನೌಕರರ ಐಕ್ಯತಾ ಸಮಾವೇಶ ಆ.28ಕ್ಕೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ರಾಜ್ಯ ಸರ್ಕಾರಿ ಎಸ್ಸಿ-ಎಸ್ಟಿ ನೌಕರರ ಸಮನ್ವಯ ಸಮಿತಿ ಕೇಂದ್ರ ಸಮಿತಿ ವತಿಯಿಂದ ಪರಿಶಿಷ್ಟ ಜಾತಿ-ಪಂಗಡಗಳ ಜಾಗೃತ ನೌಕರರ 6ನೇ ರಾಜ್ಯ ಮಟ್ಟದ ಐಕ್ಯತಾ ಸಮಾವೇಶವನ್ನು ಆ.28 ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಏರ್ಪಡಿಸಲಾಗಿದೆ ಎಂದು ಸಮಿತಿ ರಾಜ್ಯಾಧ್ಯಕ್ಷ ಡಿ.ಶಿವಶಂಕರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಸಮಾವೇಶವನ್ನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉದ್ಘಾಟಿಸಲಿದ್ದು, ಕಂದಾಯ ಸಚಿವ ಡಾ. ಜಿ.ಪರಮೇಶ್ವರ್ ಅಧ್ಯಕ್ಷತೆ ವಹಿಸಲಿದ್ದಾರೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಹೆಚ್.ಮುನಿಯಪ್ಪ, ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಶಾಸಕರು ಪಾಲ್ಗೊಳ್ಳಲಿದ್ದಾರೆ ಎಂದರು.

ರಾಜ್ಯದಲ್ಲಿ ಪರಿಶಿಷ್ಟ ಜಾತಿ-ಪಂಗಡಗಳ ಉದ್ಯೋಗ ಮತ್ತು ಶೈಕ್ಷಣಿಕವಾಗಿ ರಾಜ್ಯ ಸರ್ಕಾರ ನೀಡಿರುವ ಒಳ ಮೀಸಲಾತಿ ಕುರಿತು ಕಾಂಗ್ರೆಸ್ ಸರ್ಕಾರ ತನ್ನ ಪ್ರಣಾಳಿಕೆಯಲ್ಲಿ ತಿಳಿಸಿರುವಂತೆ ಎನ್‌ಪಿಎಸ್ (ಹಳೆಯ ಪಿಂಚಣಿ ಯೋಜನೆ) ಹಿಂಪಡೆದು ರಾಜ್ಯ ಸರ್ಕಾರಿ ನೌಕರರಿಗೆ ಓಪಿಎಸ್ ಜಾರಿ ಮಾಡಬೇಕು.

ಸೇವಾ ವಲಯದಲ್ಲಿ ಮೀಸಲಾತಿ ಸೌಲಭ್ಯ ಅನುಷ್ಠಾನಗೊಳಿಸುವಂತೆ ಸರ್ಕಾರವನ್ನು ಒತ್ತಾಯಿಸಲಾಗುವುದು. ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆ ಭರ್ತಿಗೆ ಒತ್ತಾಯಿಸಲಾಗುವುದು ಎಂದರು.

ರಾಜ್ಯ ಸರ್ಕಾರಿ ಎಸ್ಸಿ-ಎಸ್ಟಿ ನೌಕರರ ಸಮನ್ವಯ ಸಮಿತಿ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ. ಎಸ್. ವಿಜಯಕುಮಾರ್, ಉಪಾಧ್ಯಕ್ಷರಾದ ಆರ್.ಮೋಹನ್, ಕೆಂಪಸಿದ್ದಯ್ಯ, ತಾಲ್ಲೂಕು ಅಧ್ಯಕ್ಷ ಜಲೇಂದ್ರ, ಪ್ರಧಾನ ಕಾರ್ಯದರ್ಶಿ ಸಂತೋಷ್ ಕುಮಾರ್, ಜಿಲ್ಲಾ ಸಂಘಟನಾ ಕಾರ್ಯದರ್ಶಿ ವೆಂಕಟೇಶ್, ತಾಲ್ಲೂಕು ಸಹಕಾರ್ಯದರ್ಶಿ ಸತೀಶ್, ಉಪಾಧ್ಯಕ್ಷ ಪುಟ್ಟರಾಜು ಹಾಜರಿದ್ದರು.

# ತಹಶೀಲ್ದಾರ್ ಸೌಮ್ಯ ವಿರುದ್ಧ ಕ್ರಮಕ್ಕೆ ವಕೀಲರ ಒತ್ತಾಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಸರ್ಕಾರಿ ಅಧಿಕಾರಿಯಾಗಿ ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸುವ ಬದಲು ತಹಶೀಲ್ದಾರ್ ಸೌಮ್ಯ ಅವರು ದುರ್ವರ್ತನೆ ಪ್ರದರ್ಶಿಸಿದ್ದು ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ವಕೀಲ ಎ.ಆರ್.ಜನಾರ್ದನ ಗುಪ್ತ ಆಗ್ರಹಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆ. 4ರಂದು ತಹಶೀಲ್ದಾರ್ ಅವರ ನ್ಯಾಯಾಲಯದಲ್ಲಿ ಪ್ರಕರಣದ ಸಂಬಂಧ ಹಾಜರಾಗಿದ್ದ ವೇಳೆ ವಕೀಲರಿಗೆ ವಾದ ಮಂಡಿಸಲು ಅವಕಾಶ ನೀಡದೆ ಅವಹೇಳನಕಾರಿ ಹಾಗೂ ಅಸಭ್ಯವಾಗಿ ವರ್ತಿಸಿದ್ದಾರೆ ಎಂದು ಆರೋಪಿಸಿದರು.




ನ್ಯಾಯಾಲಯದಲ್ಲಿ ವಕೀಲ ವೃತ್ತಿಯ ಘನತೆಗೆ ಧಕ್ಕೆ ಉಂಟಾಗುವ ರೀತಿಯಲ್ಲಿ ವರ್ತಿಸಿರುವುದು ಖಂಡನೀಯ. ನ್ಯಾಯಾಂಗ ವ್ಯವಸ್ಥೆಯಲ್ಲಿ ವಕೀಲರು ಪ್ರಮುಖ ಅಂಗವಾಗಿದ್ದು, ಅವರೊಂದಿಗೆ ಗೌರವಯುತವಾಗಿ ನಡೆದುಕೊಳ್ಳುವುದು ಪ್ರತಿಯೊಬ್ಬ ಅಧಿಕಾರಿಯ ಕರ್ತವ್ಯ. ಆದರೆ ತಹಶೀಲ್ದಾರ್ ಅವರ ವರ್ತನೆ ವಕೀಲ ಸಮುದಾಯದ ಸ್ವಾಭಿಮಾನಕ್ಕೆ ಧಕ್ಕೆ ತಂದಿದೆ ಎಂದರು.

ವಕೀಲರ ಸಂಘದ ಅಧ್ಯಕ್ಷ ಎಂ.ಆರ್.ಗಿರೀಶ್ ಮಾತನಾಡಿ, ಈ ಘಟನೆಗೆ ಸಂಬಂಧಿಸಿ ವಕೀಲರ ಸಂಘದಲ್ಲಿ ನಿರ್ಣಯ ಕೈಗೊಂಡು ಜಿಲ್ಲಾಧಿಕಾರಿ ಸೇರಿ ಸಂಬಂಧಪಟ್ಟ ಹಿರಿಯ ಅಧಿಕಾರಿಗಳಿಗೆ ಲಿಖಿತ ದೂರು ಸಲ್ಲಿಸಲಾಗಿದೆ. ಆರೋಪದ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು.

ವಕೀಲರೊಂದಿಗೆ ತಹಸೀಲ್ದಾರ್ ಅವರು ಉಡಾಫೆಯಿಂದ ನಡೆದುಕೊಂಡಿದ್ದಾರೆ. ಈ ಬಗ್ಗೆ ವಕೀಲರ ಸಂಘದಲ್ಲಿ ನಿರ್ಣಯ ಕೈಗೊಂಡಿದ್ದಲ್ಲದೆ ಕೂಡಲೇ ಕ್ರಮ ಜರುಗಿಸುವ ಕುರಿತು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಜಿಲ್ಲಾ ಉಸ್ತುವಾರಿ ಸಚಿವ, ಸರ್ಕಾರದ ಮುಖ್ಯ ಕಾರ್ಯದರ್ಶಿ, ಜಿಲ್ಲಾಧಿಕಾರಿ ಹಾಗೂ ಉಪ ವಿಭಾಗಾಧಿಕಾರಿಗೆ ಮನವಿ ಸಲ್ಲಿಸಲಾಗಿದೆ ಎಂದರು. ವಕೀಲರಾದ ಆರ್.ಕೆ.ಮಂಜುನಾಥ್, ಚಂದ್ರಶೇಖರ್, ಸಂಘದ ಪದಾಧಿಕಾರಿಗಳು ಹಾಜರಿದ್ದರು.

# ಆ.11 ರಂದು ನಗರದಲ್ಲಿ ಟ್ರ್ಯಾಕ್ಟರ್ ಜಾಥಾ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮುಸುಕಿನ ಜೋಳಕ್ಕೆ ಬಿಳಿಸುಳಿ ರೋಗದಿಂದ ಆಗಿರುವ ನಷ್ಟ ಪರಿಹಾರ ಹಾಗು ಜಿಲ್ಲೆಯನ್ನು ಬರಪೀಡಿತ ಪಟ್ಟಿಗೆ ಸೇರಿಸುವಂತೆ ಆಗ್ರಹಿಸಿ ಆ.11 ರಂದು ನಗರದಲ್ಲಿ ಟ್ರ್ಯಾಕ್ಟರ್ ಜಾಥಾ ಆಯೋಜಿಸಲಾಗಿದೆ ಎಂದು ರೈತ ಸಂಘದ ಜಿಲ್ಲಾಧ್ಯಕ್ಷ ಕಣಗಾಲ್ ಮೂರ್ತಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 10.30ಕ್ಕೆ ಉದ್ದೂರು ರಿಂಗ್ ರಸ್ತೆ ಮೂಲಕ ತಣ್ಣೀರುಹಳ್ಳ ಮಾರ್ಗವಾಗಿ ಕೃಷಿ ಇಲಾಖೆ ಕಚೇರಿ ಎದುರು ಪ್ರತಿಭಟನೆ ನಡೆಸಿ ನಂತರ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಜಮಾಯಿಸಲಾಗುವುದು.

ಸುಮಾರು 300ಕ್ಕೂ ಅಧಿಕ ರೈತರು ತಮ್ಮ ಟ್ರ್ಯಾಕ್ಟರ್‌ಗಳೊಂದಿಗೆ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಈ ಸರ್ಕಾರ ರೈತ ಸಮುದಾಯವನ್ನು ಸಂಪೂರ್ಣ ಕಡೆಗಣಿಸಿದೆ. ಕಳೆದ ವರ್ಷದ ಬೆಳೆ ವಿಮೆ ಕಂತನ್ನು ಬಿಡುಗಡೆ ಮಾಡಬೇಕು. ಸಂಪೂರ್ಣ ಕೃಷಿ ಸಾಲ ಮನ್ನಾ ಮಾಡಬೇಕು, ಹೈನುಗಾರಿಕೆ ಮಾಡಲು ಹಸು ಖರೀದಿಸಲು ಮಾಡಿರುವ ಸಾಲ ಪಾವತಿಗೆ ಆಗ್ರಹಿಸಬಾರದು. ಖಾಸಗಿ ಫೈನಾನ್ಸ್ ಮತ್ತು ಬ್ಯಾಂಕ್‌ಗಳು ಬಲವಂತದಿಂದ ಸಾಲ ವಸೂಲಿ ಮಾಡಬಾರದೆಂದು ಆಗ್ರಹಿಸಿದರು.

ಮೆಕ್ಕೆಜೋಳ ಬಿಳಿಸುಳಿ ರೋಗಕ್ಕೆ ಕೂಡಲೇ ಪರಿಹಾರ ಕೊಡಿಸಬೇಕು.

ಕಳಪೆ ಮತ್ತು ಕಳ್ಳ ಬಿತ್ತನೆ ಬೀಜ ವಿತರಣೆಯಿಂದಲೇ ರೈತರಿಗೆ ನಷ್ಟವಾಗಿದೆ. ಸಾಲ ಮಾಡಿ ಬಿತ್ತನೆ ಮಾಡಿದ ಹಣವೂ ಕೈಸೇರಿಲ್ಲ, ಒಂದು ಎಕರೆಗೆ ಸುಮಾರು 30 ರಿಂದ 40 ಸಾವಿರ ರೂ. ಖರ್ಚು ಮಾಡಿದ್ದಾರೆ. ಹಾಗಾಗಿ ಒಂದು ಎಕರೆಗೆ 50 ಸಾವಿರ ರೂ. ಪರಿಹಾರ ಕೊಡಬೇಕೆಂದು ಆಗ್ರಹಿಸಿದರು.

ಹಾಗೆಯೇ ಸರ್ಕಾರ ಸಾಮೂಹಿಕವಾಗಿ ಬೆಳೆ ವಿಮೆ ಕಟ್ಟಿಕೊಡಬೇಕು. ಜಿಲ್ಲೆಯಲ್ಲಿ ಶೇ.40 ರಷ್ಟು ಮಳೆ ಕೊರತೆಯಾಗಿ, ಶೇ.30 ರಷ್ಟೂ ಬಿತ್ತನೆ ಕಾರ್ಯ ನಡೆದಿಲ್ಲ. ಜಿಲ್ಲೆಯನ್ನು ಬರ ಪೀಡಿತ ಎಂದು ಘೋಷಣೆ ಮಾಡಬೇಕೆಂದು ಒತ್ತಾಯಿಸಿದರು.

ರೈತರು ಸಾಕಷ್ಟು ಕಷ್ಟ ಎದುರಿಸುತ್ತಿದ್ದು, ಬ್ಯಾಂಕ್ ಇತರೆಡೆಗಳಿಂದ ಮಾಡಿರುವ ಸಾಲ ತೀರಿಸಲು ಕಷ್ಟವಾಗಿದೆ. ಹಾಗಾಗಿ ಖಾಸಗಿ ಫೈನಾನ್ಸ್‌ನವರು ಮತ್ತು ಬ್ಯಾಂಕ್‌ಗಳು ಯಾವ ಕಾರಣಕ್ಕೂ ಬಲವಂತದಿಂದ ಸಾಲ ವಸೂಲಿ ಮಾಡಬಾರದೆಂದು ಮನವಿ ಮಾಡಿದರು.

ರೈತ ಸಂಘದ ಮಂಜು ಮಾತನಾಡಿ, ಜಿಲ್ಲೆಯ ಜನಪ್ರತಿನಿಧಿಗಳಿಗೆ ರೈತರ ಬಗ್ಗೆ ಕಾಳಜಿ ಇದ್ದಿದ್ದರೆ ಸರ್ಕಾರದ ಮಟ್ಟದಲ್ಲಿ ಚರ್ಚಿಸುತ್ತಿದ್ದರು. ಜಿಲ್ಲೆಯ ಶಾಸಕರೊಬ್ಬರು 250 ಕೋಟಿ ರೂ. ವೆಚ್ಚದ ಮನೆ ನಿರ್ಮಿಸುತ್ತಿದ್ದಾರೆ. ಕೇವಲ 40 ಕೋಟಿ ರೂ. ಕೊಟ್ಟಿದ್ದರೆ ಜಿಲ್ಲೆಯ ಎಲ್ಲಾ ರೈತರ ಬೆಳೆ ವಿಮೆ ಕಂತು ಪಾವತಿಸಬಹುದಿತ್ತು. ಸ್ವಹಿತಾಸಕ್ತಿಗಾಗಿ ಚುನಾವಣೆ ಗೆಲ್ಲುವ ರಾಜಕಾರಣಿಗಳಿಂದ ಯಾವುದೇ ಲಾಭವಿಲ್ಲದಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಪಾಲಾಕ್ಷ, ಸತೀಶ್, ಸುರೇಶ್, ಮಲ್ಲೇಶ್ ಹಾಜರಿದ್ದರು.

# ಲಲಿತಾ-10

**ಧನಂಜಯ ಜೀವಾಳ ಬಿ.ಕೆ.**

**ಗ್ರಾಮಾಯಣ-42**



ಮಮತಾ ಮೇಡಂ, ಎರಡು ಕ್ಷೇತ್ರಗಳಲ್ಲಿ ಒಬ್ಬ ವ್ಯಕ್ತಿಗೆ ಒಮ್ಮೆಲೇ ಚುನಾವಣೆಗೆ ಸ್ಪರ್ಧಿಸಲು ಕಡಿವಾಣ ಹಾಕುವುದು ಅತೀ ಜರೂರಾಗಿ ಆಗಬೇಕಿದೆ. ಚುನಾವಣೆಯಲ್ಲಿ ತೊಡಗುವ ಸರ್ಕಾರಿ ಯಂತ್ರ, ಚುನಾವಣಾ ಪ್ರಕ್ರಿಯೆಯಲ್ಲಿ ಜನಜೀವನದ ತೊಡಗಿಸಿಕೊಳ್ಳುವಿಕೆ ಹಾಗೂ ರಾಷ್ಟ್ರೀಯ ವೆಚ್ಚದ ಮೇಲಾಗುವ ಪರಿಣಾಮ ಮುಂತಾದವುಗಳನ್ನು ಜವಾಬ್ದಾರಿಯುತ ಪ್ರಜೆಯು ಯೋಚಿಸಲೇಬೇಕಾದ ಅಂಶಗಳು. ಯಾವ ಪುರುಷಾರ್ಥಕ್ಕೆ ಎರಡು ಕ್ಷೇತ್ರಗಳಲ್ಲಿ ಸ್ಪರ್ಧೆ? ಸೋಲುವ ಭಯ ಕಾರಣವೇ?

ಅದ್ಹೋಗ್ಲಿ, ಈ ಸೆನ್ಸಸ್ ಮಾಡಲು ಸಹ ನಮ್ಮನ್ನೇ ಬಳಸ್ಕೋತಾರೆ. ಹಳ್ಳಿಹಳ್ಳಿಯ ಮನೆ ಸುತ್ತೋದೂ ಸಹ ಒಂದು ರೀತಿ ಖುಷೀನೇ ಅನ್ನಿ.

ನನ್ನನ್ನು ನೋಡಲು ಮೈಸೂರಿಗೆ ಬರಲೇಬೇಕೆಂದು ತಾಕೀತು ಮಾಡಿದ ಲಲಿತಳ ಬಲವಂತಕ್ಕೆ ಹೋಗಿದ್ದ ಮೇಷ್ಟ್ರು, ಆ ಮಹಾನಗರದ ಹೃದಯಭಾಗದಲ್ಲಿದ್ದ ಆ ಕಾಲೇಜು ಕಟ್ಟಡವನ್ನು ನೋಡಿಯೇ ದಂಗಾಗಿದ್ದರು. ತಾನವಳ ಕುಟುಂಬದವನೆಂದು ಹೇಳಿ ಸೀದಾ ಪ್ರಾಂಶುಪಾಲರ ಛೇಂಬರಿಗೇ ಹೋದ ಮೇಷ್ಟ್ರು, ತನ್ನ ಪರಿಚಯವನ್ನೂ ಮಾಡಿಕೊಂಡರು. ಈಗಾಗಲೇ ಹಲವಾರು ಪತ್ರಿಕೆಗಳಿಗೆ ಲೇಖನ ಬರೆದು ಒಂದಷ್ಟು ಓದುಗರ ಬಳಗವನ್ನೂ ಹೊಂದಿದ್ದ ಇವರನ್ನು ಒಂದಿಬ್ಬರು ಉಪನ್ಯಾಸಕರೂ ಗುರುತಿಸಿ, ಗೌರವದಿಂದ ಮಾತನಾಡಿಸಿ, ಅಟೆಂಡರರನು ಕಳಿಸಿ ಮೇಷ್ಟ್ರ ಸಂಬಂಧಿಕರಾದ ಕುಮಾರಿ ಲಲಿತಾಳನ್ನು ಸಂದರ್ಶಕರ ಕೊಠಡಿಗೆ ಕರೆಸಿಕೊಟ್ಟರು. ಮೇಷ್ಟ್ರ ಈ ಅಂಜದಗಂಡಿನ ಸಾಹಸಕ್ಕೆ ಎರಡನೇ ಬಾರಿಗೆ ಕ್ಲೀನ್ ಬೋಲ್ಡಾದ ಲಲಿತಾ ಕಾಲೇಜಿನ ಕಾರಿಡಾರಿನ ಉದ್ದಕ್ಕೂ ಸಿಕ್ಕ-ಸಿಕ್ಕ ತನ್ನೆಲ್ಲಾ ಗೆಳತಿಯರನ್ನು ಕರೆಕರೆದು ಇವ್ರು ನನ್ನ ಕಸಿನ್ ಎಂದು ಪರಿಚಯ ಮಾಡ್ಸಿದ್ದೇ ಮಾಡ್ಸಿದ್ದು. ಕಸಿನ್ ಎಂಬ ಪದವನ್ನು ಈ ವರೆಗೆ ಬೇರೊಂದು ರೀತಿಯಲ್ಲಿ ಗ್ರಹಿಸಿದ್ದ ಮೇಷ್ಟ್ರು, ಅಚ್ಚರಿಯಿಂದ ಹಲ್ಲು ಕಿರಿದ ಲಲನೆಯರಿಗೆ ಹೇಗೆ ಪ್ರತಿಕ್ರಿಯಿಸುವುದೋ ತಿಳಿಯದೇ ತಬ್ಬಿಬ್ಬಾದರು.

ಸುಮಾರು ನಾನೂರು ಎಕರೆಗೂ ಮೀರಿ ಹಬ್ಬಿದ್ದ ಆ ಕಾಲೇಜು ಕ್ಯಾಂಪಸ್ಸು ಮೇಷ್ಟ್ರಲ್ಲಿ ಒಂದು ರೀತಿಯ ಕೀಳರಿಮೆ ಮೂಡಿಸಲಾರಂಭಿಸಿತು. ತನ್ನ ಕಾಲೇಜು ಜೀವನದ ದಿನಗಳನ್ನು ನೆನೆಸಿಕೊಂಡು ಪೆಚ್ಚಾದರು.

ಕಾಲೇಜು ಕ್ಯಾಂಪಸ್ಸಿನ ಹತ್ತಡಿ ಎತ್ತರದ ಗೋಡೆಯ ಒಳಮಗ್ಗುಲಲ್ಲಿ ಮೂವತ್ತಡಿಗೊಂದರಂತೆ ನೆಟ್ಟು ಬೆಳೆಸಿದ್ದ ಗುಲ್ಮೊಹರ್ ಮರಗಳು ತಮ್ಮ ರಕ್ತಗೆಂಪು ಹೂವಿನ ಪಕಳೆಗಳನ್ನು ನೆಲದ ತುಂಬಾ ಹಾಸಿಗೆ ಹಾಸಿದಂತೆ ಕಣ್ಣು ಹಾಯಿಸುವವರೆಗೂ ಚೆಲ್ಲಿದ್ದವು. ಕಾಲುಹಾದಿ, ಹುಲ್ಲುಹಾಸು, ಕಲ್ಲಿನ ಬೆಂಚು ಹೀಗೆ ಸರ್ವಂ ವರ್ಣಮಯಂ ಎಂಬಂತೆ ಎಲ್ಲೆಲ್ಲೂ ಆ ಗುಲ್ಮೊಹರು ಪಕಳೆಗಳು ಹರಡಿಹೋಗಿದ್ದವು. ಅಗಷ್ಟೇ ಉದುರಿದ್ದ ಹೂ ಪಕಳೆಗಳನ್ನು ಕಾಲಿನಿಂದ ಮೆಟ್ಟಲು ಮನಸ್ಸಾಗದೇ ಅಲ್ಲೆಲ್ಲೋ ಇತ್ತೋ ಇಲ್ಲವೋ ಎಂಬಂತೆ ಅಲ್ಲಲ್ಲಿ ಕಾಣುತಿದ್ದ ಹಸಿರು ಹುಲ್ಲನ್ನೇ ಆರಿಸಿಕೊಂಡು ಅಲ್ಲಿಗೇ ತಮ್ಮ ಚರ್ಮದ ಬೂಟಿನ ಕಾಲೂರುತಿದ್ದ ಮೇಷ್ಟ್ರ ಸರ್ಕಸ್ಸನ್ನು ನೋಡಿದ ಲಲಿತ, ರೀ, ಸರಿಯಾಗಿ ನಡೀರಿ, ಯಾರಾದ್ರೂ ನೋಡಿದ್ರೆ ನಗಾಡ್ತಾರೆ, ನಮ್ ಕ್ಲಾಸ್ ಹುಡ್ಗೀರು ನೋಡಿದ್ರೆ, ಉದುರಿ ಬಿದ್ದ ಹೂವಿಗೆ ನೋವಾಗದಂತೆ ನೆಡೆಯೋರ್ನ ಎತ್ಕೊಂಡು ಹೋಗಕ್ಕಾಗ್ಲಿಲ್ವೇನೇ ಅಂತ ನನ್ನನ್ನು ರೇಗಿಸ್ತಾರೆ. ಇಲ್ಲೇ ಕೂತ್ಕೊಳ್ಳಿ ಈ ಕಲ್ಲಿನ ಬೆಂಚಿನ ಮೇಲೆ ಎಂದು ಬೆಂಚಿನ ಮೇಲೆ ಬಿದ್ದಿದ್ದ ಹೂವಿನ ಪಕಳೆಗಳನ್ನು ತನ್ನ ಕೈಯ್ಯಿಂದಲೇ ಸರಿಸಿ ನೆಲಕ್ಕೆ ಬೀಳಿಸಿದಳು. ಅದಾವುದೋ ಮಾಯದಲ್ಲಿ ಕಣ್ತಪ್ಪಿಸಿ ಕಾಂಪೌಂಡಿನೊಳಕ್ಕೆ ನುಗ್ಗಿದ್ದ ನಾಲ್ಕೈದು ದನಗಳನ್ನು ಅಟ್ಟಿಕೊಂಡು ಬಂದ ಕಾವಲುಗಾರನೊಬ್ಬ, ಈ ಜೋಡಿಯನ್ನು ನೋಡಿ ಮುಖ ಚಿಕ್ಕದು ಮಾಡಿಕೊಂಡ, ದನಗಳಿಂದ ಈ ಇಬ್ಬರು ಜನಗಳತ್ತ ತಿರುಗಿದ ಆತ ಯಾರಮ್ಮಾ ಇವರೂ? ಇಲ್ಲೆಲ್ಲ ಬರಬಾರದೂ ಅಂತ ಗೊತ್ತಿಲ್ವಾ? ಪ್ರಿನ್ಸಿಪಾಲ್ರಿಗೆ ಗೊತ್ತಾದ್ರೆ ಟೀಸೀ ಕೊಡ್ತಾರೆ ಗೊತ್ತಾ? ಎಂದ. ಅಲ್ಲಿಯವರೆಗೂ ಪೊಸಿಷನ್ ಮೈಂಟೈನ್ ಮಾಡಿಕೊಂಡು ಬಂದಿದ್ದ ಮೇಷ್ಟ್ರಿಗೆ ಈ ವಾಚ್ಮನ್ನನ ಮಾತುಗಳು ಕಿರಿಕಿರಿಯುಂಟು ಮಾಡಿದವು. ಕುಳಿತಲ್ಲಿಂದ ಎದ್ದು ನಿಂತ ಮೇಷ್ಟ್ರು ಯಾರ್ಬಗ್ಗೆ ಮಾತಾಡ್ತಿದೀಯಪ್ಪಾ? ದನ ಹೊಡ್ಕೊಂಡ್ಹೋಗಕ್ಕೆ ಬಂದಿದ್ದೀಯಲ್ಲ, ಹೊಡ್ಕೊಂಡ್ಹೋಗು ಎಂದು ಗದರಿಸಿದರು. ಮೇಷ್ಟ್ರನ್ನ ಸುಮ್ಮನಿರಲು ಹೇಳಿದ ಲಲಿತಾ ಪ್ರಿನ್ಸಿಪಾಲರೇ ಪರ್ಮಿಷನ್ ಕೊಟ್ಟು ಮಾತನಾಡಲು ಕಳಿಸಿದ್ದಾರೆ, ಇವ್ರು ನನ್ ಕಸಿನ್ ಎಂದು ಮೇಷ್ಟ್ರ ಕೈಹಿಡಿದು ಜಗ್ಗಿ ಕೂರಿಸಿದಳು. ಲಲಿತಾ ಕಣ್ಣಲ್ಲಿ ಕಣ್ಣಿಟ್ಟು ಮಾತನಾಡುತಿದ್ದರೂ ಯಾಕೋ ಆ ವಾಚ್ಮನ್ನನ ಮಾತಿನಿಂದ ಕಸಿವಿಸಿಯಾಗಿ ಸರಿ, ನಾನಿನ್ನು ಹೊರಡುತ್ತೇನೆ, ತಗೋ ಈ ಪುಸ್ತಕಗಳನ್ನ ಎಂದು ಹೊರಡಲನುವಾದರು. ತೀವ್ರ ನಿರಾಸೆಯಿಂದ ಹಾಗೂ ಬೇಸರದಿಂದ ಕಾಲೇಜಿನ ಮುಖ್ಯದ್ವಾರದವರೆಗೂ ಬಂದ ಲಲಿತಾ ಅಲ್ಲಿ ಬಂದ ಯಾವುದೋ ಆಟೋರಿಕ್ಷಾಕ್ಕೆ ಕೈಅಡ್ಡ ಹಾಕಿ ನಿಲ್ಲಿಸಿ ಸರಿ, ಹೋಗಿ ಬನ್ನಿ ಎಂದು ಒಲ್ಲದ ಮನಸ್ಸಿನಿಂದ ಬೀಳ್ಕೊಟ್ಟಳು. ಹೀಗೆಲ್ಲ ಎಗ್ಗಿಲ್ಲದೇ ಈ ಜಗತ್ತಿರುವುದೇ ಸಂತಸದ ಹಿಗ್ಗಿನಲ್ಲಿರಲು ಎಂದು ಯೋಚಿಸುತ್ತಿರುವ ದಿನಮಾನಗಳಲ್ಲೊಂದು ದಿನ ಲಲಿತಾ ಯಾವ ಒನಪು ವೈಯ್ಯಾರಗಳಿಲ್ಲದೇ ಬಂದು ಗಿರೀಶ್ ಮೇಷ್ಟ್ರ ಎದುರು ನಿಂತು ನಾ ಬರೆದ ಲೆಟರ್ರು, ಕಳಿಸಿದ ಗ್ರೀಟಿಂಗ್ಸು, ಕೊಟ್ಟ ಗಿಫ್ಟುಗಳನ್ನೆಲ್ಲ ವಾಪಾಸ್ಸು ಕೊಡಿ ಎಂದವಳೇ ಅವಳೆಂಬ ಅವಳೇ ಕರಗಿ ನೀರಾಗಿ ಇಳಿದು ಹರಿವಂತೆ ಕಣ್ಣೀರಾದಳು.

ನಿನಗೆ ನೆನಪಿದೆಯೋ ಇಲ್ಲವೋ, ನನ್ನನ್ನು ಕರೆದುಕೊಂಡು ಹೋಗಿರೆಂದು ಎರಡು ಬಾರಿ ಲಗೇಜು ಸಹಿತ ಬಂದಿದ್ದು ನೀನೇ ಅಲ್ವಾ ಲಲಿತಾ ಎಂದ ಗಿರೀಶ್ ಮೇಷ್ಟ್ರು, ಆ ಎಲ್ಲಾ ಪತ್ರ, ಕಾರ್ಡುಗಳನ್ನು ಒಂದು ದೊಡ್ಡ ಕವರಿಗೆ ಹಾಕಿ ಆ ಉದ್ಯಾನವನದ ಕಲ್ಲುಬೆಂಚಿನ ಮೇಲಿಟ್ಟು ಹಿಂದಿರುಗಿ ಸಹಾ ನೋಡದೇ ಮನಸ್ಸನ್ನು ಕಲ್ಲು ಮಾಡಿಕೊಂಡು ಕರಗಿ ನೀರಾದರು.

ನೀವು ಯಾರನ್ನೇ ಭೇಟಿಯಾದರೂ ಅದು ಸುಮ್ಮನೇ ಎಂದು ಅಂದ್ಕೋಬೇಡಿ. ಅದಕ್ಕೊಂದು ವಿವರಿಸಲಾಗದ ಕಾರಣವಿರುತ್ತೆ. ಜೊತೆಗೆ, ಊಹೆಗೂ ನಿಲುಕದ ಉದ್ದೇಶವಿರುತ್ತೆ. (ಮುಂದುವರಿಯುವುದು)

# ಇತಿಹಾಸದಲ್ಲಿ ಈ ದಿನ

## ಆಗಸ್ಟ್-08

1942: ಮುಂಬೈಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಟಭಾರತ ಬಿಡಿಟ ಚಳವಳಿಗೆ ಮಹಾತ್ಮ ಗಾಂಧೀಜಿ ಕರೆ ನೀಡಿದರು. ಇದು ಭಾರತದ ಸ್ವಾತಂತ್ರ್ಯ ಹೋರಾಟದ ಮಹತ್ವದ ಘಟ್ಟಗಳಲ್ಲಿ ಒಂದಾಗಿದೆ.

1967: ಆಗ್ನೇಯ ಏಷ್ಯಾದ ಐದು ರಾಷ್ಟ್ರಗಳು ಸೇರಿ Association of Southeast Asian Nations ಸಂಸ್ಥೆಯನ್ನು ಸ್ಥಾಪಿಸಿದವು.

1988: ಮ್ಯಾನ್ಮಾರ್‌ನಲ್ಲಿ ಪ್ರಜಾಪ್ರಭುತ್ವಕ್ಕಾಗಿ ನಡೆದ ಐತಿಹಾಸಿಕ 8888 ಜನಾಂದೋಲನ ಆರಂಭವಾಯಿತು.

### ಜನನ

1879: ಎಮಿಲಿಯಾನೊ ಜಪಾಟಾ, ಮೆಕ್ಸಿಕೊದ ಕ್ರಾಂತಿಕಾರಿ ನಾಯಕ.

1902: ಪಾಲ್ ಎ. ಎಂ. ಡಿರಾಕ್, ನೊಬೆಲ್ ಪ್ರಶಸ್ತಿ ಪುರಸ್ಕೃತ ಭೌತವಿಜ್ಞಾನಿ

1937: ಡಸ್ಟಿನ್ ಹಾಫ್‌ಮನ್, ಹಾಲಿವುಡ್‌ನ ಖ್ಯಾತ ನಟ

### ನಿಧನ

1942: ರವೀಂದ್ರನಾಥ ಟಾಗೋರ್, ನೊಬೆಲ್ ಪ್ರಶಸ್ತಿ ವಿಜೇತ ಕವಿ, ಸಾಹಿತ್ಯಗಾರ ಮತ್ತು ತತ್ವಜ್ಞಾನಿ

2017: ಗ್ಲೆನ್ ಕ್ಯಾಂಪ್ಬೆಲ್, ಅಮೆರಿಕದ ಖ್ಯಾತ ಗಾಯಕ ಮತ್ತು ಸಂಗೀತಗಾರ

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248